ಯಾವುದೇ ವಿದ್ವಾಂಸರ ಸಂಪಾದನೆಯಾದರೂ, ಅಂತಿಮ ಕರಡನ್ನು ಸರಿಯಾಗಿ ತಿದ್ದದಿದ್ದರೆ ಅಥವಾ ಈಗಿನ ಪದ್ಧತಿಯ ಪ್ರಕಾರ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ಪಠ್ಯದಲ್ಲಿ, ತಪ್ಪುಗಳನ್ನು ಸರಿಯಾಗಿ ತಿದ್ದಿ, 'Save' ಮಾಡದಿದ್ದರೆ, ತಪ್ಪುಗಳು ಉಳಿದು, ಅದೇ ಸರಿಯಾದ ಪಾಠ ಎನ್ನುವ ತಿಳಿವಳಿಕೆ ಬರಬಹುದು. ಮೂಲ ಶಾಸನದಲ್ಲೂ ಆ ದೋಷ ಅಥವಾ ತಪ್ಪುಗಳಿವೆ ಎಂದು ಭಾವಿಸಲು ಅವಕಾಶಗಳಿರುತ್ತವೆ. ಆದ್ದರಿಂದ, ಗಣಕಯಂತ್ರದಲ್ಲಿ ಬೆರಳಚ್ಚಿನ ಮೂಲಕ ಸಿದ್ಧಪಡಿಸಿದ ಯಾವುದೇ ಪಠ್ಯವನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸಿಕೊಳ್ಳಬೇಕಾಗುತ್ತದೆ.

ಸಂಪಾದಿತ ಎಲ್ಲಾ ಶಾಸನ ಸಂಪುಟಗಳಲ್ಲೂ ಒಂದೇ ಕ್ರಮವನ್ನು ಅನುಸರಿಸಲಾಗಿರುವುದಿಲ್ಲ. ಕೆಲವು ಜಿಲ್ಲಾವಾರು ಸಂಪುಟಗಳಲ್ಲಿ ತಾಲ್ಲೂಕುವಾರು, ಗ್ರಾಮವಾರು ಶಾಸನಗಳನ್ನು ಸಂಪಾದಿಸಿ ಪ್ರಕಟಿಸಲಾಗಿರುತ್ತದೆ. ದಕ್ಷಿಣ ಭಾರತೀಯ ಶಾಸನ ಸಂಪುಟಗಳಲ್ಲಿನ ಸಂಪಾದನ ಕ್ರಮವೇ ಬೇರೆ. ಯಾವುದೇ ಸಂಪುಟಗಳಲ್ಲಿ ಶಾಸನಗಳ ಸಂಪಾದನೆಯು ಕಾಲಾನುಕ್ರಮದಲ್ಲಿರುವುದಿಲ್ಲ. ಆದರೆ, ಷ. ಶೆಟ್ಟರ್ ಅವರು ಸಂಪಾದಿಸಲು ಉದ್ದೇಶಿಸಿದ ಶಾಸನ ಸಂಪುಟದ ಶೀರ್ಷಿಕೆಯೇ 'ಮೊದಲ ಸಹಸ್ರಮಾನದ ಕನ್ನಡ ಶಾಸನಗಳು'. ಆದ್ದರಿಂದ ಇಲ್ಲಿ ಶಾಸನಗಳು ಕಾಲಾನುಕ್ರಮದಲ್ಲಿ ಜೋಡಣೆಯಾಗುವುದು ಅನಿವಾರ್ಯವಾಗಿತ್ತು. ಜೊತೆಗೆ, ಶಾಸನದಲ್ಲಿ ಪ್ರಸ್ತಾಪಿತವಾಗಿರುವ ವಿಷಯವನ್ನು ಆಧರಿಸಿ, ಅವುಗಳಿಗೆ, ತುರುಗಾಳಗ, ಊರಳಿವು, ಆತ್ಮಬಲಿ, ನಿಸಿಧಿ, ಇತ್ಯಾದಿ ಸೂಕ್ತ ಶೀರ್ಷಿಕೆಯನ್ನು ನೀಡುವುದು ಅಪೇಕ್ಷಣೀಯವಾಗಿತ್ತು. ಇವೆಲ್ಲವನ್ನು ತಪ್ಪದಂತೆ ಗಮನದಲ್ಲಿ ಇಟ್ಟುಕೊಂಡಿರುವುದು ಷ. ಶೆಟ್ಟರ್ ಅವರ ಸಮರ್ಥ ಸಂಪಾದನ ಸಾಮರ್ಥ್ಯ.

ಪ್ರಕಟಗೊಂಡಿರುವ ಶಾಸನಗಳನ್ನು ಮಾತ್ರ ಪರಿಗಣಿಸಿರುವ ಈ ಶಾಸನ ಸಂಪುಟದಲ್ಲಿ, ಕಾಲಾನುಕ್ರಮಕ್ಕೆ ಆದ್ಯತೆ ನೀಡಬೇಕಾಗಿದ್ದು ಅನಿವಾರ್ಯ. ಉಳಿದ ಸಂಪುಟಗಳಲ್ಲಿ ಆ ಕ್ರಮದ ಅನುಸರಣೆ ಸಾಧ್ಯವಲ್ಲ ಮತ್ತು ಸಮರ್ಪಕವೂ ಅಲ್ಲ. ಅಲ್ಲಿ ಶಾಸನ ದೊರೆತ ಸ್ಥಳವನ್ನು ಆಧರಿಸುವುದು ಅನಿವಾರ್ಯ. ಕೇವಲ ಶಾಸನಗಳ ಪ್ರಕಟಣೆಗೆ ಆದ್ಯತೆ ಇರುವ ಸಂಪುಟಗಳಲ್ಲಿ, ಶಾಸನಗಳ ಲಿಪ್ಯಂತರ, ಅರ್ಥ ಮತ್ತು ಸಾರಾಂಶಗಳ ಇಂಗ್ಲಿಷ್ ಪ್ರಸ್ತುತಿ ಇರುತ್ತದೆ. ಆ ಸಂಪುಟಗಳು ಕನ್ನಡೇತರರನ್ನೂ ತಲುಪಬೇಕೆನ್ನುವ ನಿರೀಕ್ಷೆಯಿಂದ ಈ ಕ್ರಮ ಬೇಕಾಗುತ್ತದೆ. ಒಂದು ಶಾಸನದ ವಿವರವಾದ ಚರ್ಚೆಗೆ ಅವಕಾಶ ಬೇಕು ಎನಿಸಿದಾಗ, 'ಎಪಿಗ್ರಾಫಿಯಾ ಇಂಡಿಕಾ' ಮಾದರಿಯನ್ನು ಅನುಸರಿಸಲಾಗುತ್ತದೆ. ಹೀಗೆ, ಒಂದೊಂದು ಸರಣಿಯ ಸಂಪುಟಗಳ ಸ್ವರೂಪವೂ ಭಿನ್ನವಾಗಿರುತ್ತದೆ.

'ಮೊದಲ ಸಹಸ್ರಮಾನದ ಕನ್ನಡ ಶಾಸನಗಳು' ಸಂಪುಟದಲ್ಲಿ ಶಾಸನಪಠ್ಯವನ್ನು ಕಾಲಾನುಕ್ರಮಣಿಕೆಯಲ್ಲಿ ನೀಡಲಾಗಿದೆ. ಆ ಶಾಸನದ ಶೀರ್ಷಿಕೆ(ತುರುಗೋಳ್, ನೆತ್ತರಕೊಡುಗೆ, ಊರಳಿವು ಇತ್ಯಾದಿ)ಯ ಜೊತೆಗೆ ಶಾಸನ ದೊರೆತ ಸ್ಥಳ, ಮೊದಲಿಗೆ ಶಾಸನ ಪ್ರಕಟವಾಗಿರುವ ಶಾಸನ ಸಂಪುಟ, ಶಾಸನದ ವರ್ಗ (ಶಿಲೆ ಅಥವಾ ತಾಮ್ರಪಟ್ಟಿಕೆ) ಉಲ್ಲೇಖಿತ ರಾಜ, ಕಾಲದ ಉಲ್ಲೇಖದ ನಂತರ ಶಾಸನದ ಪಠ್ಯವನ್ನು ನೀಡಲಾಗಿದೆ. ಶಾಸನದ ಪಠ್ಯವನ್ನು ನೀಡಿದ ನಂತರ, ಪಠ್ಯದಲ್ಲಿ ಪದಗಳ ಛೇದ ಮಾಡಿ, ಅವುಗಳ ಅರ್ಥವನ್ನು ಬಿಡಿಬಿಡಿಯಾಗಿ, ಯಾವುದೇ ಸಂದೇಹಕ್ಕೆ ಅವಕಾಶವಾಗದಂತೆ ನೀಡಿ, ಶಾಸನದ ಭಾವಾರ್ಥವನ್ನು ವರ್ತಮಾನದ ಕನ್ನಡದಲ್ಲಿ ನೀಡಲಾಗಿದೆ.

ಮೊದಲ ಸಹಸ್ರಮಾನದ ಶಾಸನಗಳು ದೊರೆತ ಸ್ಥಳಗಳ ಪಟ್ಟಿಯನ್ನು ಅಕಾರಾದಿಯಾಗಿ ನೀಡಿ, ಇವುಗಳ ಪ್ರಾದೇಶಿಕ ವರ್ಗೀಕರಣವನ್ನು ದಾಖಲಿಸಿದ ನಂತರ ಈ ಶಾಸನಗಳು ಪ್ರಕಟವಾಗಿರುವ ಶಾಸನ ಸಂಪುಟಗಳ ಯಾದಿಯನ್ನು ಒದಗಿಸಿದ್ದಾರೆ.

ಈ ಸರಣಿಯ ಮೊದಲ ಸಂಪುಟದಲ್ಲಿ ನಮೂದಿತವಾಗಿರುವಂತೆ, ಕ್ರಿ.ಶ. 357(?)ರ ತಾಗರ್ತಿಅಗ್ರಹಾರದ (ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾ.) ತಾಮ್ರಶಾಸನವೇ ಸಂಸ್ಕೃತ/ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯ ಮೊದಲ ಲಭ್ಯ ಶಾಸನ. ಸಾಮಾನ್ಯ ತಿಳಿವಳಿಕೆಯಂತೆ ಸದ್ಯಕ್ಕೆ ಲಭ್ಯವಿರುವ ಮೊದಲ ಕನ್ನಡ ಶಾಸನ ಹಲ್ಮಿಡಿಯದು. ಈಚಿನ ವರದಿಗಳ ಪ್ರಕಾರ ಆ ಸ್ಥಾನವನ್ನು ತಾಳಗುಂದದ ಪ್ರಣವೇಶ್ವರ ದೇವಾಲಯದ ಆವರಣದಲ್ಲಿ ಉತ್ಖನನದ ವೇಳೆ